### ಮಾರ್ಮಿಕ ಚಿತ್ರಣ

'ಅಭಿವೃದ್ಧಿಯ ಶಿಕಾರಿ ಬಂಡೀಪುರ', ಸುಮಂಗಲಾ ಅವರ ಮುಖಪುಟ ಲೇಖನ (ಸುಧಾ, ಸೆಪ್ಟೆಂಬರ್ 13) ಚೆನ್ನಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಹೇಗೆ ರಕ್ಷಿತಾರಣ್ಯವನ್ನು ಸರ್ಕಾರವೇ ನಾಶ ಮಾಡುವತ್ತ ಸಾಗುತ್ತಿದೆ ಎಂಬುದನ್ನು ಲೇಖಕಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಈಗಾಗಲೇ ಅಮೂಲ್ಯವಾದ ಮರಗಿಡಗಳಿಂದ ತುಂಬಿದ್ದ ಕೊಡಗಿನಲ್ಲಿನ ಅರಣ್ಯವನ್ನು ಬೇಕಾಬಿಟ್ಟಿ ನಾಶ ಮಾಡಿ ಮನುಕುಲದ ವಿನಾಶದತ್ತ ಅಭಿವೃದ್ಧಿಯ ಪಥ ಸಾಗಿದೆ. ಇನ್ನು ಬಂಡೀಪುರದ ಅಭಿವೃದ್ಧಿಯ ಯೋಜನೆಯಿಂದ ಅರಣ್ಯ, ಅಮೂಲ್ಯವಾದ ಪ್ರಾಣಿ ಸಂಪತ್ತು, ಔಷಧಿ ಸಸ್ಯ ನಾಶವಾದರೇನಂತೆ ಗುತ್ತಿಗೆದಾರರ, ಜನಪ್ರತಿನಿಧಿಗಳ ಅಧಿಕಾರಿಗಳ ಜೇಬು ತುಂಬಿದರೆ ಸಾಕು. ವಿನಾಶದ ಸುಳಿವು ಕಾಣುತ್ತಿದ್ದರೂ ಕಣ್ಮುಚ್ಚಿ ಕುಳಿತಿರುವ ಜನ ಪ್ರತಿನಿಧಿಗಳು ಎಚ್ಚೆತ್ತುಕೊಳ್ಳಲಿ.

—ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ,
ಶ್ಯಾಮಲಾ ಮಾಧವ ಮುಂಬಯಿ

### ಮೋಹಕ ಚಿತ್ರಗಳು

ಮುಖಪುಟ ಲೇಖನದ ಚಿತ್ರಗಳು ಮೋಹಕ ವಾಗಿದೆ. ಎಡೆಬಿಡದೆ ಚಲಿಸುವ ವಾಹನಗಳಿಗೆ ತಡೆ ಅಗತ್ಯ. ಅವು ನಿಧಾನವಾಗಿ ಜಾಗ್ರತೆಯಿಂದ, ಪ್ರಾಣಿಗಳಿಗೆ ತೊಂದರೆಯಾಗದಂತೆ ಚಲಿಸಲಿ.

—ರತ್ನಾಕರ ಹೆಗಡೆಕಟ್ಟೆ, ಮೂಡುಬಿದಿರೆ

### ಆಕರ್ಷಕ ಮುಖಪುಟ

ರಾಷ್ಟ್ರೀಯ ಪ್ರಾಣಿ ಹುಲಿಯ ಗತ್ತು ಗಾಂಭೀರ್ಯದ ಮುಖಪುಟ ಚಿತ್ರ ಚೆನ್ನಾಗಿ ಮೂಡಿ ಬಂದಿದೆ. ಲೇಖನಗಳಿಗೆ ನೀಡಲಾದ ತಲೆಬರಹಗಳು ಆಕರ್ಷವಾಗಿದ್ದು ಓದುವ ಆಸಕ್ತಿಯನ್ನು ಹೆಚ್ಚಿಸುತ್ತಿದೆ.

— ಸೀಮಾ ಪೋನಡ್ಕ ಪುತ್ತೂರು

### ಹನಿಗವನ

ಧಾರಾವಾಹಿ ಪುಟದಲ್ಲಿ ಪ್ರಕಟವಾದ ಹನಿಗವನ 'ಕಣ್ಣೀರು' (ವಿ.ಹೇಮಂತ ಕುಮಾರ) ಬಹಳ ಅರ್ಥಗರ್ಭಿತವಾಗಿದೆ.

—ಎಚ್. ವಿ. ಕೇಶವಮೂರ್ತಿ ಬೆಂಗಳೂರು

### ವಾರಾಂತ್ಯ ವಿಹಾರಕ್ಕೆ ಸೂಕ್ತ

'ಬೆಡಗಿನ ಎಡಮುರಿ' ((ಗಣಂಗೂರು ನಂಜೇಗೌಡ) ಲೇಖಕರು ತಿಳಿಸಿದಂತೆ ವಾರಾಂತ್ಯ ವಿಹಾರಕ್ಕೆ ಹೇಳಿ ಮಾಡಿಸಿದ ತಾಣ ಎಡಮುರಿ ಫಾಲ್ಸ್. ಹೆಚ್ಚು ಪ್ರಚಾರವಿಲ್ಲದೆ ಸೀಮಿತ ಪ್ರವಾಸಿಗರ ಆಕರ್ಷಣೆಯ ಮಿನಿ ಫಾಲ್ಸ್ ಆಗಿದೆ.

—ಕೋಟೇಶ್ವರ ಸೂರ್ಯನಾರಾಯಣ ರಾವ್,
ಬೆಂಗಳೂರು

### ಶತಮಾನದ ಸೇತುವೆ

'ನೂರು ವರ್ಷ ದಾಟಿದ ಸೇತುವೆ' (ವಿ. ಬಾಲಕೃಷ್ಣ ಶಿರ್ವ) ಲೇಖನ ಸಾಂದರ್ಭಿಕವಾಗಿದೆ. ಸೆ.15 ಎಂಜಿನಿಯರರ ದಿನ. ಭಾರತರತ್ನ ಎಂ. ವಿಶ್ವೇಶ್ವರಯ್ಯನವರ ಜನ್ಮದಿನ (ಸೆಪ್ಟೆಂಬರ್ 15)ವೂ ಆಗಿದ್ದು ಲೇಖನ ಗಮನ ಸೆಳೆಯುವಂತಿದೆ.

—ಮುಕುಂದ ಹೆರಕಲ್ಲ




### ಮಕ್ಕಳ ಕಥೆ

'ಎಳೆಯರ ಅಂಗಳ'ದ ಪುಟ್ಟ ಕಥೆ 'ಅವಸರದ ಬುದ್ಧಿಗೆ ತಕ್ಕಪಾಠ' (ವಿ. ವಿಜಯೇಂದ್ರ ರಾವ್) ಎಳೆಯರು ಮಾತ್ರವಲ್ಲ ಎಲ್ಲರೂ ಓದಲರ್ಹವಾದ ಕಥೆ.

—ಆರ್.ಎಚ್. ಮೂಡುಬಿದಿರೆ

### ಚಿಂತನಾರ್ಹ

ವಿಚಾರ ಲಹರಿಯಲ್ಲಿ 'ಅವನು ಅವಳಾಗುವ ಪರಿ' (ಅಮೃತಮತಿ) ಬರಹ ಚಿಂತನಾರ್ಹ.

—ರಾಜಶೇಖರ ಹಾದಿಮನಿ, ಧಾರವಾಡ

### ದಿಕ್ಕು ತಪ್ಪಿದ ಕಥೆ

ಕಥೆ 'ದಾನ' (ಗೀತಾ ಸೀತಾರಾಮ್) ದಲ್ಲಿ ಕತೆಗಾರ್ತಿ ಒಂದು ಸಾಮಾಜಿಕವಾದ, ಅತಿ ಪ್ರಸ್ತುತವಾದ ಅಂಗ ದಾನದ ವಿಷಯವನ್ನು ಕತೆಯ ವಿಷಯವಾಗಿ ಎತ್ತಿಕೊಂಡಿದ್ದಾರೆ. ಅಂಗ ದಾನ ಹಲವರಿಗೆ, ವೈದ್ಯಕೀಯ ಕ್ಷೇತ್ರಕ್ಕೆ ವರದಾನವಾದರೂ, ಅಂಗ ದಾನ ಮಾಡುವ ಹಲವರು ನಿಜಕ್ಕೂ ಶೋಚನೀಯ ಪರಿಸ್ಥಿತಿಯಲ್ಲಿದ್ದಾರೆ. ಆದರೆ 'ದಾನ' ಕತೆ ಬೆಳೆಯುವ, ಅಂತ್ಯಗೊಳ್ಳುವ ಬಗ್ಗೆ ಕತೆಗಾರ್ತಿ ದಿಕ್ಕು ತಪ್ಪಿದ್ದಾರೆ ಎಂಬುದು ನನ್ನ ಭಾವನೆ.

ಕತೆಯ ಪ್ರಮುಖ ಪಾತ್ರಧಾರಿ ನೇಪಾಳದ 18ರ ಹರೆಯದ 'ಸುಂದರಿ' ರುಕ್ಮಿಣಿ. ರುಕ್ಮಿಣಿ ಇಂತಹ ಚಿಕ್ಕ ವಯಸ್ಸಿನಲ್ಲೇ ಅತಿ ದಿಟ್ಟತನ ತೋರಿ, ತನ್ನ ಪ್ರಾಣವನ್ನು ಪಣಕ್ಕಿಟ್ಟು ನೇಪಾಳದ ಪೊಲೀಸರಿಗೆ, ಸರ್ಕಾರಕ್ಕೆ ಪತ್ರ ಬರೆದು, ಮೂತ್ರಪಿಂಡ ದಾನದ ದಂಧೆಯಲ್ಲಿ ದಲ್ಲಾಳಿಗಳ ಜಾಲವನ್ನು ಬಯಲು ಮಾಡಿ, ಅವರನ್ನು ಸೆರೆಮನೆಗೆ ಕಳಿಸಿರುತ್ತಾಳೆ. ಆಕೆಯ ಕೆಲಸವನ್ನು ಸಾಧನೆಯೆಂದು ಗುರುತಿಸಿದ ಸರ್ಕಾರ ಮನ್ನಣೆಯಾಗಿ ಅವಳ ಮುಂದಿನ ಶಿಕ್ಷಣದ ವೆಚ್ಚವನ್ನು ತಾನೇ ಭರಿಸಲು ಮುಂದಾಗುತ್ತದೆ. ಇಂತಹ ಯುವತಿಗೆ 18ಕ್ಕೆ ಮದುವೆ ಮಾಡಿಸ ಬೇಕಿತ್ತೇ? ತನ್ನ 24 ರ ಅಣ್ಣನ ಹೆಮ್ಮೆಯಾದ, ಕುಟುಂಬಕ್ಕೆ ಆದರ್ಶವಾದ ಈಕೆಗೆ ಮದುವೆ ಮಾಡಿ ಕಳುಹಿಸುವ ಮನಸ್ಸು ಆ ಕುಟುಂಬಕ್ಕೆ ಬರಬೇಕಿತ್ತೇ? ಆಕೆ ಸುಂದರಿಯಾಗಿಲ್ಲದಿದ್ದರೆ ಮದುವೆ ಆಗುತ್ತಿರಲಿಲ್ಲವೇ? ಅದರಲ್ಲೂ ಪ್ರಾಯಶಃ ಆಕೆಗಿಂತ ಎರಡರಷ್ಟು ಪ್ರಾಯದ ಪ್ರಾಧ್ಯಾಪಕನೊಂದಿಗೆ? ಯಾರು ಯಾರಿಗೆ ಬದುಕು ನೀಡುವುದು? ಯಾರು ದಾನಿಗಳು?

— ಲಕ್ಷ್ಮಿ ಎನ್. ಬೆಂಗಳೂರು

### ಉಪಯುಕ್ತ ಆರೋಗ್ಯ ಲೇಖನ

ಆರೋಗ್ಯ ಲೇಖನ (ಆ.30ರ ಸಂಚಿಕೆ) 'ನಿದ್ದೆ ಬರುತ್ತಿಲ್ಲವೆ?' (ಡಾ. ವಿನೋದ್ ಕುಲಕರ್ಣಿ) ಆರೋಗ್ಯ ಸಲಹೆ ಅತ್ಯುಪಯುಕ್ತವಾಗಿದೆ. ಇದು ನನ್ನ ಅನುಭವ. ಮಧುಮೇಹ ಮತ್ತು ರಕ್ತದೊತ್ತಡಗಳಿರುವ ನನ್ನ ವಯಸ್ಸು 71. ರಾತ್ರಿ ಮಲಗುವ ಮುನ್ನ ಪ್ರಾರ್ಥನೆ ಮಾಡಿದ ಮೇಲೆ ಬರುವ ನಿದ್ರೆಯಿಂದ ಎಚ್ಚರವಾಗುವುದು ಬೆಳಿಗ್ಗೆಯೇ.

—ಮುನಿಯಾಲು ಸದಾನಂದ ನಾಯಕ
ಬೆಂಗಳೂರು



